<u>**ಕರ್ನಾಟಕ ವಿಧಾನ ಪರಿಷತ್ತು**</u>

ಚುಕ್ಕೆ ಗುರುತಿನ ಪ್ರಶ್ನೆ: (849)90
ಮಾನ್ಯ ಸದಸ್ಯರ ಹೆಸರು: ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು: ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸುವ ದಿನಾಂಕ: 24.08.2026

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಸ್ತುತ ಆಗ್ನೇಯ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ-ಕಾಲೇಜುಗಳಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ; (ಜಿಲ್ಲಾವಾರು ವಿವಿರ ನೀಡುವುದು).</td><td>ಆಗ್ನೇಯ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳಲ್ಲಿ ಪ್ರಸ್ತುತ ಖಾಲಿ ಇರುವ ಶಿಕ್ಷಕ ಹಾಗೂ ಉಪನ್ಯಾಸಕರ ಖಾಲಿ ಹುದ್ದೆಗಳ ವಿವರ ಕೆಳಕಂಡಂತಿದೆ:-
<table>
<tr><th>ಜಿಲ್ಲೆ</th><th>ಸರ್ಕಾರಿ ಪ್ರಾಥಮಿಕ ಶಾಲೆ</th><th>ಅನುದಾನಿತ ಪ್ರಾಥಮಿಕ ಶಾಲೆ</th><th>ಸರ್ಕಾರಿ ಪ್ರೌಢ ಶಾಲೆ</th><th>ಅನುದಾನಿತ ಪ್ರೌಢ ಶಾಲೆ</th></tr>
<tr><td>ಚಿತ್ರದುರ್ಗ</td><td>876</td><td>136</td><td>168</td><td>618</td></tr>
<tr><td>ಚಿಕ್ಕಬಳ್ಳಾಪುರ</td><td>555</td><td>205</td><td>355</td><td>112</td></tr>
<tr><td>ಕೋಲಾರ</td><td>491</td><td>181</td><td>436</td><td>183</td></tr>
<tr><td>ದಾವಣಗೆರೆ</td><td>512</td><td>245</td><td>125</td><td>448</td></tr>
<tr><td>ತುಮಕೂರು</td><td>482</td><td>157</td><td>314</td><td>631</td></tr>
<tr><td>ತುಮಕೂರು ಮಧುಗಿರಿ</td><td>599</td><td>18</td><td>274</td><td>278</td></tr>
<tr><td>ಒಟ್ಟು</td><td>3515</td><td>942</td><td>1672</td><td>2270</td></tr>
</table>
<table>
<tr><th>ಜಿಲ್ಲೆ</th><th>ಸರ್ಕಾರಿ ಪದವಿ ಪೂರ್ವ ಕಾಲೇಜು</th><th>ಅನುದಾನಿತ ಪದವಿ ಪೂರ್ವ ಕಾಲೇಜು</th></tr>
<tr><td>ಚಿತ್ರದುರ್ಗ</td><td>194</td><td>178</td></tr>
<tr><td>ಚಿಕ್ಕಬಳ್ಳಾಪುರ</td><td>132</td><td>13</td></tr>
<tr><td>ಕೋಲಾರ</td><td>187</td><td>10</td></tr>
<tr><td>ದಾವಣಗೆರೆ</td><td>114</td><td>167</td></tr>
<tr><td>ತುಮಕೂರು</td><td>347</td><td>341</td></tr>
<tr><td>ಒಟ್ಟು</td><td>974</td><td>709</td></tr>
</table></td></tr>
<tr><td>ಆ)</td><td>ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ವೇತನ ಅನುದಾನ, ಸೇವಾ ಭದ್ರತೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಖಾಸಗಿ ಅನುದಾನಿತ ಪ್ರೌಢಶಾಲಾ ನೌಕರರಿಗೆ ಮುಂಗಡ ವೇತನಾನುದಾನ, ವಿಶೇಷ ವೇತನ ಭತ್ಯೆ, ಗಳಿಕೆ ರಜೆ ನಗದೀಕರಣ ಸೌಲಭ್ಯ, ಕಾಲಮಿತಿ ವೇತನ ಬಡ್ತಿ, ಸ್ವಯಂಚಾಲಿತ ವೇತನ ಬಡ್ತಿ, ಹೆಚ್ಚುವರಿ ವೇತನ ಬಡ್ತಿ, ಸ್ಥಗಿತ ವೇತನ ಬಡ್ತಿ, ಎಫ್‌ಬಿಎಫ್ ಸೌಲಭ್ಯಗಳನ್ನು ಮತ್ತು ಅನುದಾನಿತ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರು/ನೌಕರರು ಮೃತಪಟ್ಟರೆ ಅವರ ಕುಟುಂಬದ ಸದಸ್ಯರಿಗೆ ಅನುಕಂಪ ಆಧಾರಿತ ದ್ವಿತೀಯ ದರ್ಜೆ ಸಹಾಯಕ ಹುದ್ದೆಯನ್ನು ನೀಡಲಾಗುತ್ತಿದೆ.</td></tr>
<tr><td>ಇ)</td><td>ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಸರಳೀಕರಿಸಿ, ದಂಪತಿ ಪ್ರಕರಣ, ವೈದ್ಯಕೀಯ ಕಾರಣ ಹಾಗೂ ಪರಸ್ಪರ ವರ್ಗಾವಣೆಗೆ ಆದ್ಯತೆ ನೀಡಲು ಸರ್ಕಾರ</td><td>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ), ಅಧಿನಿಯಮ 2020, 2022 ಮತ್ತು 2026 ರಲ್ಲಿನ ನಿಯಮ 10ರಂತೆ ದಂಪತಿ ಪ್ರಕರಣ,</td></tr>
</table>

<table>
<tr>
<td></td>
<td>ಕೈಗೊಂಡಿರುವ ಕ್ರಮಗಳೇನು; ಹಾಗೂ ಶಿಕ್ಷಕರು-ವಿದ್ಯಾರ್ಥಿಗಳ ಅನುಪಾತವನ್ನು ಕಾಪಾಡಲು ಅಗತ್ಯವಿರುವ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರದ ಕ್ರಮವೇನು;</td>
<td>ವೈದ್ಯಕೀಯ ಕಾರಣ ಹಾಗೂ ಪರಸ್ಪರ ವರ್ಗಾವಣೆ ಸಂಬಂಧ ಆದ್ಯತೆ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಅಗತ್ಯವಿರುವ ಮಾಹಿತಿ ಮತ್ತು ದಾಖಲೆಗಳೊಂದಿಗೆ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ವರ್ಗಾವಣೆಯಿಂದ ವಿನಾಯಿತಿ ಪಡೆಯಬಹುದಾಗಿರುತ್ತದೆ.<br><br>ಕಾಲಕಾಲಕ್ಕೆ ಅಗತ್ಯತೆಗೆ ತಕ್ಕಂತೆ ವಿನಾಯಿತಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿರುತ್ತದೆ.<br><br>ಶಿಕ್ಷಕರು-ವಿದ್ಯಾರ್ಥಿಗಳ ಅನುಪಾತವನ್ನು ಕಾಪಾಡಲು ಅಗತ್ಯವಿರುವ ಹೆಚ್ಚುವರಿ ಶಿಕ್ಷಕರನ್ನು ಸರ್ಕಾರದ ಆದೇಶ ಸಂಖ್ಯೆ: ಇಪಿ 53 ಡಿಪಿಐ 2026, ಬೆಂಗಳೂರು, ದಿನಾಂಕ: 14-07-2026ರಲ್ಲಿ ನೇಮಕಾತಿ ಮಾಡಿಕೊಳ್ಳಲು ಈಗಾಗಲೇ ಅನುಮೋದನೆ ನೀಡಲಾಗಿರುತ್ತದೆ.</td>
</tr>
<tr>
<td>ಈ)</td>
<td>ಅತಿಥಿ ಶಿಕ್ಷಕರನ್ನು ಅವಲಂಬಿಸುವ ಪರಿಸ್ಥಿತಿ ನಿವಾರಿಸಿ ಖಾಯಂ ಶಿಕ್ಷಕರ ನೇಮಕಾತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ಸರ್ಕಾರಿ ವಸತಿ ಅಥವಾ ವಸತಿ ಭತ್ಯೆ ಒದಗಿಸುವ ಕುರಿತು ಸರ್ಕಾರದ ಯೋಜನೆಗಳೇನು;</td>
<td>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ :<br><br>ಅತಿಥಿ ಶಿಕ್ಷಕರನ್ನು ಅವಲಂಬಿಸುವ ಪರಿಸ್ಥಿತಿ ನಿವಾರಿಸಿ ಖಾಯಂ ಶಿಕ್ಷಕರ ನೇಮಕಾತಿ ಮಾಡುವ ಕುರಿತಂತೆ, ಸರ್ಕಾರದ ಆದೇಶ ಸಂಖ್ಯೆ: ಇಪಿ 53 ಡಿಪಿಐ 2026 ದಿನಾಂಕ:14-07-2026ರಲ್ಲಿ ಶಿಕ್ಷಕರ ನೇಮಕಾತಿಗೆ ಆದೇಶಿಸಲಾಗಿದ್ದು, ಅದರಂತೆ, ನೇಮಕಾತಿ ಸಂಬಂಧ ಕ್ರಮವಹಿಸಲಾಗುತ್ತಿದೆ.<br><br>ಉಳಿದಂತೆ ಪ್ರೌಢಶಾಲೆಗಳಿಗೆ ಸಹ ಶಿಕ್ಷಕರು 4,500, ದೈಹಿಕ ಶಿಕ್ಷಣ ಶಿಕ್ಷಕರು 450, ಒಟ್ಟಾರೆಯಾಗಿ 4,950 ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಸಂಬಂಧ ಕ್ರಮವಹಿಸಲಾಗುತ್ತಿದೆ.<br><br>ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ಸರ್ಕಾರಿ ವಸತಿ ಅಥವಾ ವಸತಿ ಭತ್ಯೆ ನೀಡಲಾಗುತ್ತಿಲ್ಲ.</td>
</tr>
<tr>
<td>ಉ)</td>
<td>ಆಗ್ನೇಯ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಯಲ್ಲಿ ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ಕಾಪಾಡಲು ಅಗತ್ಯವಿರುವ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
<td>ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ :<br><br>ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನೇಮಕಾತಿ ಮಾಡಲಿರುವ ಶಿಕ್ಷಕರ ಸಂಖ್ಯೆ
<table>
<tr><th>ಕ್ರ ಸಂ</th><th>ಜಿಲ್ಲೆಗಳು</th><th>ನೇಮಕಾತಿ ಮಾಡಲಿರುವ ಶಿಕ್ಷಕರ ಸಂಖ್ಯೆ</th></tr>
<tr><td>1</td><td>ಚಿಕ್ಕಬಳ್ಳಾಪುರ</td><td>142</td></tr>
<tr><td>2</td><td>ಚಿತ್ರದುರ್ಗ</td><td>172</td></tr>
<tr><td>3</td><td>ದಾವಣಗೆರೆ</td><td>144</td></tr>
<tr><td>4</td><td>ಕೋಲಾರ</td><td>161</td></tr>
<tr><td>5</td><td>ತುಮಕೂರು</td><td>171</td></tr>
<tr><td>6</td><td>ಮಧುಗಿರಿ</td><td>105</td></tr>
<tr><td></td><td>ಒಟ್ಟು</td><td>895</td></tr>
</table></td>
</tr>
</table>

**ಸರ್ಕಾರಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ :**

ಸರ್ಕಾರದ ಆದೇಶ ಸಂಖ್ಯೆ: ಇಪಿ 53 ಡಿಪಿಐ 2026 ದಿ:14-07-2026 ರಲ್ಲಿ ಪ್ರೌಢಶಾಲೆಗಳಿಗೆ ಸಹ ಶಿಕ್ಷಕರನ್ನು ನೇರ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ.

| ಅಗ್ನೇಯ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯಲ್ಲಿ ಶಿಕ್ಷಕ ವಿದ್ಯಾರ್ಥಿ ಅನುಪಾತಕ್ಕೆ ಅನುಗುಣವಾಗಿ ನೇಮಕ ಮಾಡಿಕೊಳ್ಳಲಿರುವ ಪ್ರೌಢ ಶಾಲೆಗಳ ಶಿಕ್ಷಕರ ಸಂಖ್ಯೆ | | |
|---|---|---|
| ಕ್ರ ಸಂ | ಜಿಲ್ಲೆಗಳು | ನೇಮಕಾತಿ ಮಾಡಲಿರುವ ಶಿಕ್ಷಕರ ಸಂಖ್ಯೆ |
| 1 | ಚಿಕ್ಕಬಳ್ಳಾಪುರ | 109 |
| 2 | ಚಿತ್ರದುರ್ಗ | 75 |
| 3 | ದಾವಣಗೆರೆ | 56 |
| 4 | ಕೋಲಾರ | 104 |
| 5 | ತುಮಕೂರು | 88 |
| 6 | ಮಧುಗಿರಿ | 69 |
| | ಒಟ್ಟು | 501 |

**ಸಂಖ್ಯೆ:ಇಪಿ 108 ಪಿಎಂಎ 2026**

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು